ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ADMIOEST(3)/15/2020 / 423

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 25.06.2024

**ಜ್ಞಾಪನ**

**ವಿಷಯ :** ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಆಯುಕ್ತರ ಕಛೇರಿ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಸರ್ಕಾರಿ ಪಾಲಿಟೆಕ್ನಿಕ್ / ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹೊರಗುತ್ತಿಗೆ ಗ್ರೂಪ್-ಡಿ ಸಿಬ್ಬಂದಿಗಳು Aadhar Enabled Biometric Attendance System(AEBAS) ರಲ್ಲಿ ಹಾಜರಾತಿಯನ್ನು ನಿರ್ವಹಿಸುವ ಕುರಿತು.

**ಉಲ್ಲೇಖ:** 1. ತಾಂತ್ರಿಕ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: ಡಿಟಿಇ/42/ಇಎಸ್‌ಟಿ(3)/2017 ದಿನಾಂಕ: 21.07.2018

2. ತಾಂತ್ರಿಕ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: ಡಿಟಿಇ/42/ಇಎಸ್‌ಟಿ(3)/2020 ದಿನಾಂಕ: 21.01.2021
3. ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಸೂಚನೆ ಸಂಖ್ಯೆ: ಡಿಟಿಇ/15/ಇಎಸ್‌ಟಿ(3)/2021 ದಿನಾಂಕ: 04-10-2021, ದಿ: 14.01.2022, ದಿ: 14.02.2022, ದಿ: 04.04.2022, ದಿ: 06.06.2022, ದಿ: 11.10.2022, ದಿ: 21.07.2023, ದಿ: 01.09.2023, ದಿ: 10.10.2023, ಮತ್ತು ದಿ: 07.06.2024.
4. ತಾಂತ್ರಿಕ ಶಿಕ್ಷಣ ಇಲಾಖೆಯ ಸುತ್ತೋಲೆ ಸಂಖ್ಯೆ: ಡಿಟಿಇ/02/ADM10/EST9/2024, ದಿನಾಂಕ: 23.04.2024, 02.05.2024, 28.05.2024 ಹಾಗೂ ಸಂಖ್ಯೆ: DTE-PLANSPS51/19/2024, ದಿ: 27.05.2024.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಕೇಂದ್ರ ಕಛೇರಿ / ಸಂಸ್ಥೆಗಳಲ್ಲಿ ಖಾಲಿಯಿರುವ ಗ್ರೂಪ್-ಡಿ (ಕಛೇರಿ / ಕಾರ್ಯಾಗಾರ) ಹುದ್ದೆಗೆದುರಾಗಿ ಮಾನವ ಸಂಪನ್ಮೂಲ ಏಜೆನ್ಸಿಗಳಾದ ಮೆ॥ ಮಾತಾ ಟೆಕ್ನಾಲಜೀಸ್, ಧಾರವಾಡ ಮತ್ತು ಮೆ॥ ಆಬ್ಜೆಕ್ಟ್ ಟೆಕ್ನಾಲಜೀಸ್, ಬೆಂಗಳೂರು ಇವರ ಮೂಲಕ ಹೊರಗುತ್ತಿಗೆ ಮೇರೆಗೆ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ಕಾರ್ಯಾದೇಶ ನೀಡಲಾಗಿರುತ್ತದೆ. ಅದರಂತೆ ಉಲ್ಲೇಖ(3) ಮತ್ತು (4) ರ ಅಧಿಸೂಚನೆಯಲ್ಲಿ ತಿಳಿಸಿರುವ ಸಂಖ್ಯೆಯ ಮಿತಿಯೊಳಗೆ ಸಂಸ್ಥೆಯಲ್ಲಿ ಖಾಲಿಯಿರುವ ಗ್ರೂಪ್-ಡಿ ಹುದ್ದೆಗೆದುರಾಗಿ ಮಾನವ ಸಂಪನ್ಮೂಲ ಏಜೆನ್ಸಿ ಮುಖಾಂತರ ಹೊರಗುತ್ತಿಗೆ ಮೇರೆಗೆ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಅನುಮತಿ ನೀಡಲಾಗಿರುತ್ತದೆ.

...2/-

ಉಲ್ಲೇಖ(4) ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಆಯುಕ್ತರ ಕಛೇರಿ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಸರ್ಕಾರಿ ಪಾಲಿಟೆಕ್ನಿಕ್ / ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಖಾಯಂ ಅಧಿಕಾರಿ / ಸಿಬ್ಬಂದಿಗಳ (ಬೋಧಕ / ಬೋಧಕೇತರ ಸಿಬ್ಬಂದಿಗಳು) ವೈಯಕ್ತಿಯ ವಿವರಗಳನ್ನು Aadhar Enabled Biometric Attendance System ರಲ್ಲಿ ನೊಂದಾಯಿಸಿ, ಸದರಿ ತಂತ್ರಾಂಶದ ಮುಖಾಂತರ ಕಡ್ಡಾಯವಾಗಿ ಹಾಜರಾತಿಯನ್ನು ದಾಖಲಿಸಲು ಈಗಾಗಲೇ ಸೂಚಿಸಲಾಗಿರುತ್ತದೆ.

ಅದರಂತೆ, ಕಛೇರಿ / ಸಂಸ್ಥೆಗಳಲ್ಲಿ ಖಾಲಿಯಿರುವ ಗ್ರೂಪ್-ಡಿ ಹುದ್ದೆಗೆದುರಾಗಿ ಹೊರಗುತ್ತಿಗೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-ಡಿ ಸಿಬ್ಬಂದಿಗಳ ವೈಯಕ್ತಿಕ ವಿವರಗಳನ್ನು ಸಹ ಕಡ್ಡಾಯವಾಗಿ Aadhar Enabled Biometric Attendance System(AEBAS) ರಲ್ಲಿ **ದಿನಾಂಕ: 30.06.2024** ರೊಳಗೆ ನೊಂದಾಯಿಸಿ, AEBAS ತಂತ್ರಾಂಶದ ಮೂಲಕ **ದಿನಾಂಕ: 01.07.2024** ರಿಂದ ಕಡ್ಡಾಯವಾಗಿ ಹಾಜರಾತಿಯನ್ನು ದಾಖಲಿಸಲು ಕ್ರಮವಹಿಸಲು ಸೂಚಿಸಲಾಗಿದೆ. **ಸದರಿ AEBAS ತಂತ್ರಾಂಶದಿಂದ ಪಡೆದ ಹಾಜರಾತಿಯ ಮಾಹಿತಿಯಂತೆ ಜುಲೈ-2024 ರ ಮಾಹೆಯಿಂದ ವೇತನ ಪಾವತಿಸಲು ಕ್ರಮವಹಿಸಲಾಗುವುದು. ಒಂದು ವೇಳೆ AEBAS ತಂತ್ರಾಂಶದಲ್ಲಿ ಸಂಸ್ಥೆಯಲ್ಲಿ ಹೊರಗುತ್ತಿಗೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-ಡಿ ಸಿಬ್ಬಂದಿಗಳ ಹಾಜರಾತಿಯನ್ನು ನಿಯಮಾನುಸಾರ ದಾಖಲಿಸದೇ ಇದ್ದಲ್ಲಿ ವೇತನವನ್ನು ಪಾವತಿಸಲು ಸಾಧ್ಯವಾಗುವುದಿಲ್ಲ ಹಾಗೂ ಮುಂದಿನ ಆಗು ಹೋಗುಗಳಿಗೆ ತಮ್ಮನ್ನೇ ನೇರ ಜವಾಬ್ದಾರನ್ನಾಗಿ ಮಾಡಲಾಗುವುದೆಂದು ಸೂಚಿಸಿದೆ.**

ಹೊರಗುತ್ತಿಗೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-ಡಿ ಸಿಬ್ಬಂದಿಗಳ ಮಾಹಿತಿಯನ್ನು **AEBAS** ತಂತ್ರಾಂಶದಲ್ಲಿ **"Employee Registration"** ರಲ್ಲಿನ **"Employee Type"** ನಲ್ಲಿ **"Non Government"** ಎಂದು ಆಯ್ಕೆ ಮಾಡಲು ಹಾಗೂ **"Organization Employee Code"** ನಲ್ಲಿ ಮಾತಾ ಟೆಕ್ನಾಲಜೀಸ್, ಧಾರವಾಡ ಇವರ ಮುಖಾಂತರ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ **"MT ಎಂದು ಆಧಾರ್ ಸಂಖ್ಯೆ(MT000000000000)"**ಯೊಂದಿಗೆ ನಮೂದಿಸಲು ಹಾಗೂ ಆಬ್ಜೇಕ್ಟ್ ಟೆಕ್ನಾಲಜೀಸ್, ಬೆಂಗಳೂರು ಇವರ ಮುಖಾಂತರ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ **"OT ಎಂದು ಆಧಾರ್ ಸಂಖ್ಯೆ" (OT000000000000)**ಯೊಂದಿಗೆ ನಮೂದಿಸಲು ಸೂಚಿಸಿದೆ.

ಈ ಪ್ರಕ್ರಿಯಲ್ಲಿ ಯಾವುದೇ ಸಂದೇಹ ಅಥವಾ ಸ್ಪಷ್ಟೀಕರಣ ಕುರಿತು ಈ ಕೆಳಕಂಡ ಅಧಿಕಾರಿಯವರನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಶ್ರೀ ಶ್ರೀನಿವಾಸ ಎಂ.ಎಸ್.
ಹಿರಿಯ ಶ್ರೇಣಿ ಉಪನ್ಯಾಸಕರು,
ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
ಮೊಬೈಲ್ ಸಂಖ್ಯೆ: 9741884442

ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಇವರಿಗೆ:-

1. ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ / ಸರ್ಕಾರಿ ಪಾಲಿಟೆಕ್ನಿಕ್ / ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ;

2. ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.

ಪ್ರತಿ:-

1. ಹಿರಿಯ ವ್ಯವಸ್ಥಾಪಕರು, ಮಾತಾ ಟೆಕ್ನೋಲಜೀಸ್, ಮಾತೃಕೃಪ, ಪ್ಲಾಟ್ ನಂ.106, 1ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ, ಸಪ್ತಗಿರಿ ನಗರ, ಯಾಲಕ್ಕಿ ಶೆಟ್ಟರ ಕಾಲೋನಿ, ಧಾರವಾಡ-580 004;
2. ಹಿರಿಯ ವ್ಯವಸ್ಥಾಪಕರು, ಆಬ್ಜೇಕ್ಟ್ ಟೆಕ್ನೋಲಜೀಸ್, ನಂ. 12/1, 25ನೇ ಅಡ್ಡ ರಸ್ತೆ, 6ನೇ ಬ್ಲಾಕ್, ಜಯನಗರ, ಬೆಂಗಳೂರು-560 070;
3. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
4. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.